ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/06/ಎಲ್ಆರ್‌ಡಿಸಿ/2017-18 / 1645

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 13-09-2017

## -: ಸುತ್ತೋಲೆ :-

ವಿಷಯ:- 2017-18 ನೇ ಸಾಲಿನ "41ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ವನ್ನು ಆಯೋಜಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರದ ಸಂಖ್ಯೆ: ಇಡಿ 097 ಟಿಪಿಇ 2016 ದಿನಾಂಕ: 03-10-2016

* * * * * *

ವಿದ್ಯಾರ್ಥಿಗಳಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಹೊರತರುವ ಉದ್ದೇಶದಿಂದ ಪ್ರತಿ ವರ್ಷವೂ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ರಾಜ್ಯದ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದ್ದು, ಕಳೆದ ವರ್ಷ ಅಂದರೆ 2016-17ನೇ ಸಾಲಿನ 40ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳದಲ್ಲಿ ನಿರ್ದೇಶನಾಲಯದ ಸಹಯೋಗದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಸುಮಾರು 1200 ರಿಂದ 1300 ವಿದ್ಯಾರ್ಥಿಗಳು, 130 ರಿಂದ 150 ಉಪನ್ಯಾಸಕರು/ಸಿಬ್ಬಂದಿ ವರ್ಗದವರು ಭಾಗವಹಿಸುವ ಸಂಭವವಿದ್ದು, ಸದರಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯವರಿಗೆ ಎರಡು ದಿನಗಳಂದು ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲು ಹಾಗೂ ಕ್ರೀಡಾಕೂಟವನ್ನು ಆಯೋಜಿಸಲು ತಗಲುವ ಇತರೆ ವೆಚ್ಚಗಳನ್ನು ಭರಿಸಲು ಸರ್ಕಾರದ ವತಿಯಿಂದ **12 ಲಕ್ಷ ರೂಪಾಯಿಗಳ (ಹನ್ನೆರಡು ಲಕ್ಷ ರೂಪಾಯಿಗಳು ಮಾತ್ರ)** ಅನುದಾನವನ್ನು ನೀಡಲಾಗುವುದು.

ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ಆಯೋಜಿಸಲು ಬೇಕಾಗಿರುವ ಕ್ರೀಡಾಂಗಣ ಲಭ್ಯವಿರುವ ಹಾಗೂ ಮೇಲ್ಕಂಡ ಸೌಲಭ್ಯಗಳನ್ನು ನೀಡಿ 2017-18 ನೇ ಸಾಲಿನ **"41ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ"** ವನ್ನು ಆಯೋಜಿಸಲು ಇಚ್ಚಿಸುವ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು ತಮ್ಮ ಸಮ್ಮತಿಯನ್ನು ದಿನಾಂಕ:17.10.2017 ರೊಳಗಾಗಿ ಈ ಕಛೇರಿಗೆ ತಿಳಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ.
2. ಇ-ಗೌರ್ವನೆನ್ಸ್ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ

ಪ್ರತಿ: ಜಂಟಿ ನಿರ್ದೇಶಕರು(ಯೋಜನೆ) ಇವರ ಮಾಹಿತಿಗಾಗಿ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಪತ್ರದನ್ವಯ ಅನುದಾನವನ್ನು ಕಾಯ್ದಿರಿಸಲು ಕೋರಿದೆ.